3.	ಲೇಖನ ಸಾಮಗ್ರಿಗೆ	ಒಂದು ನ್ಯಾಯಾಲಯಕ್ಕೆ ರೂ. 20,000 ಗಳು
4.	ಪಿ:ಠೋಪಕರಣಕ್ಕೆ	ರೂ. 200000 ಗಳು
5.	ವಾನಹ ಖರೀದಿಗೆ	ಒಂದು ವಾಹನಕ್ಕೆ ರೂ. 300000ಗಳು
6.	ಕಛೇರಿ ವೆಚ್ಚ	ಒಂದು ವರ್ಷಕ್ಕೆ ಒಂದು ನ್ಯಾಯಾಲಯಕ್ಕೆ ರೂ. 60000 ಗಳು

ತ್ವರಿತ ನ್ಯಾಯಾಲಯಗಳಿಗೆ ಸೇವೆಯಲ್ಲಿರುವ ನ್ಯಾಯಾಧೀಶರುಗಳನ್ನು ನೇಮಕ ಮಾಡಲು ಸರ್ಕಾರ ಒಪ್ಪಿಗೆ ನೀಡಿದೆ.

ರಾಜ್ಯದಲ್ಲಿರುವ ಕೆ.ಎಸ್.ಆರ್. ಟಿ. ಸಿ ಹಾಗೂ ಖಾಸಗಿ ಬಸ್ಸುಗಳ ಟಾಪ್ ಮೇಲೆ ಪ್ರಯಾಣ

1913(2272) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿರುವ ಕೆ.ಎಸ್.ಆರ್.ಟಿ.ಸಿ. ಹಾಗೂ ಖಾಸಗಿ ಬಸ್ಸುಗಳ ಟಾಪ್ ಮೇಲೆ ಪ್ರಯಾಣಿಸುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಹಾಗಿದ್ದಲ್ಲಿ ಇದರ ನಿಯಂತ್ರಣಕ್ಕಾಗಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಇ. ಇತ್ತೀಚೆಗೆ ರಾಜ್ಯ ಉಚ್ಚನ್ಯಾಯಾಲಯ ಬಸ್ಸಿನ ಟಾಪ್ ಮೇಲೆ ಪ್ರಯಾಣ ಮಾಡುವುದನ್ನು ನಿರ್ಬಂಧಿಸುವಂತೆ ರಾಜ್ಯ ಸರ್ಕಾರಕ್ಕೆ ಸೂಚನೆ ನೀಡಿದ್ದರೂ ಬೆಳಗಾವಿ ಕೆ.ಎಸ್.ಆರ್.ಟಿ.ಸಿ. ಬಸ್ಸುಗಳ ಟಾಪ್ ಮೇಲೆ ಇನ್ನೂ ಪ್ರಯಾಣಿಸುತ್ತಿರುವ ಸಂಗತಿ ನಿಜವೇ;

ಈ. ಹಾಗಿದ್ದಲ್ಲಿ, ಅದನ್ನು ನಿಯಂತ್ರಿಸಲು ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ರಮಾನಾಥ ರೈ (ಸಾರಿಗೆ ಸಚಿವರು)

ಅ. ಬಂದಿದೆ.

ಆ. ಈ ರೀತಿ ಪ್ರಯಾಣಿಸುವುದನ್ನು ತಡೆಗಟ್ಟಲು ರಾಜ್ಯದ ಎಲ್ಲಾ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಹಾಗೂ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಇಲಾಖಾವತಿಯಿಂದ ಆಗತ್ಯ ಸೂಚನೆಗಳನ್ನು ನೀಡುತ್ತಾ ಬಂದಿದೆ.

ಇ. ದಿನಾಂಕ 13.3.2003ರಂದು ಉಚ್ಚನ್ಯಾಯಾಲಯದ ಆದೇಶ ಬಂದಿದ್ದು, ಇದನ್ನು ಚಾಚುತಪ್ಪದೆ ಪಾಲಿಸುವಂತೆ ಎಲ್ಲಾ ಪ್ರಾದೇಶಿಕ:ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ನಿರ್ದೇಶಿಸಲಾಗಿದೆ.

ಈ. ಬಸ್ಸುಗಳ ಮೇಲ್ಚಾವಣಿ ಮೇಲೆ ಕುಳಿತು ಪ್ರಯಾಣಿಸುತ್ತಿರುವವರನ್ನು ತಡೆಗಟ್ಟಲು ಪ್ರಚಾರ ಮಾಧ್ಯಮಗಳ ಮೂಲಕ ನ್ಯಾಯಾಲಯದ ಆದೇಶವನ್ನು ಸಾರ್ವಜನಿಕರಿಗೆ ತಿಳಿಸಲು ಕ್ರಮ ತೆಗೆದುಕೊಳ್ಳಲಾಗಿದೆ ಹಾಗೂ ಜನದಟ್ಟಣೆ ಇರುವ ಮಾರ್ಗಗಳನ್ನು ಗುರುತಿಸಿ ವಿಷಯಗಳನ್ನು ಪ್ರಾದೇಶಿಕ ಸಾರಿಗೆ ಪ್ರಾಧಿಕಾರಿಗಳ ಮುಂದೆ ಮಂಡಿಸಿ ಆಗತ್ಯವಿರುವ ವ್ಯವಸ್ಥೆ ಮಾಡಲಾಗುವುದು ಹಾಗೂ ಇಲಾಖೆಯ ಹಿರಿಯ ಆಧಿಕಾರಿಗಳು ಈ ಬಗ್ಗೆ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದು, ಇದನ್ನು ಸಂಪೂರ್ಣವಾಗಿ ಹತೋಟಿಗೆ ತರಲಾಗುವುದು.